# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 255/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಮಹದೇವಸ್ವಾಮಿ | ಪಿಡಬ್ಲ್ಯೂ : 3 |
| ತಂದೆಯ / ಗಂಡನ ಹೆಸರು | : ಮಾದೇವ | ಸಿಡಬ್ಲ್ಯೂ : 3 |
| ವಯಸ್ಸು | : 38 ವರ್ಷ | |
| ಉದ್ಯೋಗ | : ವ್ಯವಸಾಯ | |
| ವಾಸಸ್ಥಳ | : ಹುಣಸನಾಳು ಗ್ರಾಮ , ನಂಜನಗೂಡು ತಾಲ್ಲೂಕು | |

**ಸಾಕ್ಷಿಯನ್ನು ಈ ದಿನ ದಿಃ 24.05.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಸಹಿ ಹಾಕುತ್ತೇನೆ. ಈಗ ತೋರಿಸುತ್ತಿರುವ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ದಿಃ 01.06.2023 ರಂದು ಮಾಡಿದ ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು , ಅದನ್ನು ಈಗಾಗಲೇ ನಿಪಿ 2 ಎಂದು ಗುರುತುಪಡಿಸಿಕೊಳ್ಳಲಾಗಿದ್ದು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 2(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು.

2. ಈಗ್ಗೆ ಒಂದು ವರ್ಷದ ಹಿಂದೆ ಸಂಜೆ 05.30 ರ ಸಮಯಕ್ಕೆ ಹುಣಸನಾಳು ಗ್ರಾಮದಲ್ಲಿ ನಾನು ಡೈರಿಗೆ ಹಾಲನ್ನು ಹಾಕಿ ವಾಪಾಸ್ಸು ಮನೆಯ ಕಡೆಗೆ ಹೋಗುತ್ತಿದ್ದೆ. ಆಗ ಪೋಲೀಸರು ಚಿಕ್ಕರಾಜಶೆಟ್ಟಿ ಮನೆಯ ಹತ್ತಿರ ಇದ್ದರು. ಆಗ ನಾನು ಅಲ್ಲಿಗೆ ಹೋದೆ. ಪೋಲೀಸರು ಇದ್ದರು , ಬಸಮ್ಮ ಅಂದರೆ 2 ನೇ ಆರೋಪಿ ಸಹ ಇದ್ದಳು. ಎಲ್ಲರು ಒಟ್ಟಿಗೆ

ಮನೆಯ ಒಳಕ್ಕೆ ಹೋದೆವು. ಅಲ್ಲಿ ನೋಡಿದಾಗ ಚಿಕ್ಕರಾಜಶೆಟ್ಟಿ ಮಲಗಿದ್ದರು. ರಕ್ತಮಯವಾಗಿತ್ತು. ಆಗ ಬಸಮ್ಮ ತೊಡೆಯ ಮೇಲೆ ಹಾಕಿಕೊಂಡು ಅಳುತ್ತಿದ್ದರು. ಆಗ ಪೋಲೀಸರು ಬಸಮ್ಮಳನ್ನು ಅಲ್ಲಿಂದ ಪೋಲೀಸ್ ಠಾಣೆಗೆ ಕರೆದುಕೊಂಡು ಹೋದರು. ಅಲ್ಲಿ ಪೋಲೀಸರು ಪೋಟೋ ತೆಗೆದುಕೊಂಡರು. ಅಲ್ಲಿ ತೀರಿ ಹೋಗಿದ್ದ ಚಿಕ್ಕರಾಜಶೆಟ್ಟಿಯ ಪೋಟೋವನ್ನು ಪೋಲೀಸರು ತೆಗೆದುಕೊಂಡರು. ನನ್ನನ್ನು ಹಾಗೂ ರಾಜುವನ್ನು ನಿಲ್ಲಿಸಿಕೊಂಡು ಸಹ ಪೋಟೋ ತೆಗೆದುಕೊಂಡರು. ನಂತರ ನಮ್ಮನ್ನು ಕಳುಹಿಸಿದರು. ಒಂದು ವಾರದ ನಂತರ ಪೋಲೀಸರು ನಮ್ಮನ್ನು ಪೋಲೀಸ್ ಠಾಣೆಗೆ ಬರಲು ಹೇಳಿದ್ದರು. ಅದರಂತೆ ಹೋದೆವು. ಅಲ್ಲಿ ಪೋಲೀಸರು ನನ್ನ ಸಹಿಯನ್ನು ಪಡೆದರು.

3. ಈಗ ತೋರಿಸುತ್ತಿರುವ ಇನ್ನೂಂದು ದಾಖಲಾತಿಯ ಮೇಲೂ ಸಹ ನನ್ನ ಸಹಿ ಇರುತ್ತದೆ. ಅದು ದಿಃ 01.06.2023 ರಂದು ನಂಜನಗೂಡು ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಮಾಡಿದ ಅಮಾನತ್ತು ಮಹಜರ್ ಅಗಿದ್ದು ಅದನ್ನು ಈಗ ನಿಪಿ 10 ಎಂತಲು ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 10(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ಸದರಿ ಸಹಿಯನ್ನು ಪೋಲೀಸ್ ಠಾಣೆಯಲ್ಲಿ ಹಾಕಿದ್ದೇನೆ. 5 ದಿನಗಳ ನಂತರ ಠಾಣೆಗೆ ಕರೆದಾಗ ಈ ಸಹಿಯನ್ನು ಹಾಕಿದ್ದೆ. ಪೋಲೀಸ್ ಠಾಣೆಯಲ್ಲಿ ಒಟ್ಟು 2 ಸಹಿಗಳನ್ನು ಹಾಕಿರುತ್ತೇನೆ. ಆ ಸಹಿಯನ್ನು ಏತಕ್ಕಾಗಿ ಪಡೆದರು ಎನ್ನುವುದು ನನಗೆ ಗೊತ್ತಿಲ್ಲ.

4. ಮೊದಲು , ಪೋಲೀಸರು ಬಸಮ್ಮಳೊಂದಿಗೆ ಚಿಕ್ಕರಾಜಶೆಟ್ಟಿ ಮನೆಯ ಒಳಗೆ ಹೋದಾಗ ಅಲ್ಲಿ ಪೋಲೀಸರು ಯಾವುದೇ ವಸ್ತುಗಳನ್ನು ನನ್ನ ಸಮಕ್ಷಮ ಅಮಾನತ್ತು

ಪಡಿಸಿಕೊಂಡಿರುವುದಿಲ್ಲ. ಅಲ್ಲಿ ತೆಗೆದ ಪೋಟೋ ಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಒಟ್ಟು 6 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳಲ್ಲಿ , 2 ಪೋಟೋಗಳಲ್ಲಿ ನಾನು ಇದ್ದೇನೆ ಎಂದು ಗುರುತಿಸಿರುತ್ತಾರೆ. ಮೊದಲ ಎರಡು ಪೋಟೋಗಳಲ್ಲಿ ತಲೆಗೆ ಟವೆಲ್ ಸುತ್ತಿಕೊಂಡಿರುವ ವ್ಯಕ್ತಿ ನಾನೇ ಎನ್ನುತ್ತಾರೆ. ಅದರಲ್ಲಿ ಇರುವ ಇನ್ನಿಬ್ಬರು ವ್ಯಕ್ತಿಗಳು ರಾಜು ಮತ್ತು ಸಿದ್ದರಾಜು. ಸದರಿ ಪೋಟೋಗಳನ್ನು ಈಗಾಗಲೇ ನಿಪಿ 3 ರಿಂದ 8 ಎಂದು ಗುರುತುಪಡಿಸಿಕೊಳ್ಳಲಾಗಿದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

<u>ಪಾಟೀ ಸವಾಲು ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

5. ಸಾಕ್ಷಿಗೆ ಎಂ ಒ 1 ರಿಂದ 11 ರ ಮೇಲಿರುವ ಚೀಟಿಯಲ್ಲಿರುವ ಬರಹ ಮತ್ತು ಸಹಿಯನ್ನು ತೋರಿಸಿ ಕೇಳಲಾಗಿ, 'ನನ್ನ ಸಹಿ ಇರುತ್ತದೆ ' ಎಂದು ಸಹಿಯನ್ನು ನೋಡಿ ಒಪ್ಪಿರುತ್ತಾರೆ.

6. ನಿಪಿ 3, 4 ಮತ್ತು 8 ಪೋಟೋಗಳಲ್ಲಿ ಶವದ ಪಕ್ಕದಲ್ಲಿರುವ ಗುಂಡು ಕಲ್ಲು ನ್ಯಾಯಾಲಯದ ಮುಂದಿರುವ ಗುಂಡು ಕಲ್ಲು ಅಂದರೆ ಎಂ ಒ 2 ಆಗಿರುತ್ತದೆ ಎನ್ನುವುದು ಸರಿ .

7. ಆರೋಪಿತರು ಮತ್ತು ನಾನು ಊರಿನಲ್ಲಿ ಚೆನ್ನಾಗಿದ್ದೇವೆ ಎನ್ನುವುದು ಸರಿ. ಮೃತ ಚಿಕ್ಕರಾಜಶೆಟ್ಟಿಯ 2 ನೇ ಹೆಂಡತಿ ಮತ್ತು ಒಬ್ಬ ಮಗ ಗುಂಡ್ಲುಪೇಟೆ ತಾಲ್ಲೂಕಿನ ಹುಲ್ಲಾಪುರದಲ್ಲಿದ್ದಾರೆ.

8. ಪೋಲೀಸುರ ಆ ಸ್ಥಳಕ್ಕೆ ಬಂದು, ಆ ಮನೆಯನ್ನು ಪರಿಶೀಲಿಸಿ ನಮ್ಮ ಸಮಕ್ಷಮ ರಾತ್ರಿ 11.10 ರಿಂದ ಮಧ್ಯ ರಾತ್ರಿ 12.30 ರ ವರೆಗೆ ವಿದ್ಯುತ್ ಲೈಟ್ ಬೆಳಕಿನ ಸಹಾಯದಿಂದ ನನ್ನ ಹಾಗೂ ರಾಜು , ಸಿದ್ದರಾಜು ರವರ ಸಮಕ್ಷಮ ಮಹಜರ್ ಮಾಡಿ ಎಂ ಒ 1 ರಿಂದ 11 ನ್ನು ಅಮಾನತ್ತು ಪಡಿಸಿಕೂಂಡು ನಮ್ಮ ಸಹಿಯನ್ನು ಪಡೆದರು ಎಂದರೆ ಸರಿಯಲ್ಲ. ಎಂ ಒ 1 ರಿಂದ 11 ನ್ನು ಪ್ರತ್ಯೇಕವಾಗಿ ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ಸೀಲು ಮಾಡಿ ನಮ್ಮಗಳ ಸಹಿ ಇರುವ ಚೀಟಿಯನ್ನು ಎಲ್ಲದರ ಮೇಲೂ ಅಂಟಿಸಿದರು ಎನ್ನುವುದು ಸರಿಯಲ್ಲ. ನಿಪಿ 2 ರ ಮೇಲಿರುವ ನನ್ನ ಸಹಿಯನ್ನು ನಾನು ಚಿಕ್ಕರಾಜಶೆಟ್ಟಿಯ ಶವ ಬಿದ್ದಿದ್ದ ಸ್ಥಳದಲ್ಲೇ ಹಾಕಿರುತ್ತೇನೆ ಎನ್ನುವುದು ಸರಿಯಲ್ಲ. ಅಲ್ಲಿ ಮಾಡಿದ ಮಹಜರ್ ನ ವಿಚಾರವನ್ನು ತಿಳಿದುಕೂಂಡು ಸಹಿ ಹಾಕಿರುತ್ತೇನೆ ಎನ್ನುವುದು ಸರಿಯಲ್ಲ.

9. ನಂತರ ಬಸಮ್ಮಳನ್ನು ನಂಜನಗೂಡು ಗ್ರಾಮಾಂತರ ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದು , ಆಗಲೂ ಸಹ ನಾನು ಮತ್ತು ರಾಜು ಠಾಣೆಗೆ ಹೋಗಿದ್ದು , ಅಲ್ಲಿ ಆಕೆ ಧರಿಸಿದ್ದ ಬಟ್ಟೆಯ ಮೇಲೆ ರಕ್ತದ ಕಲೆಗಳು ಇದುದ್ದರಿಂದ , ಆಕೆಗೆ ಬೇರೆಯ ಬಟ್ಟೆಯ ವ್ಯವಸ್ಥೆ ಮಾಡಿ ಆಕೆ ಧರಿಸಿದ್ದ ಬಟ್ಟೆಗಳನ್ನೂ ಸಹ ಅಮಾನತ್ತು ಪಡಿಸಿಕೊಂಡರು ಎನ್ನುವುದು ಸರಿಯಲ್ಲ.

10. ಈಗ ತೋರಿಸುತ್ತಿರುವ ವಸ್ತುಗಳಿರುವ ಸೀಲು ಮಾಡಿದ ಬಿಳಿಯ ಪ್ಯಾಕೆಟ್ ಮೇಲಿರುವ ಚೀಟಿಗಳಲ್ಲಿ ನನ್ನ ಸಹಿ ಇವೆ. ಈಗ ತೆರೆದ ನ್ಯಾಯಾಲಯದಲ್ಲಿ ಸದರಿ ಬಿಳಿಯ ಪ್ಯಾಕೆಟ್ ಗಳ ಮೇಲೆ ಇದ್ದಂತಹ ಸೀಲನ್ನು ತೆಗೆದು ಪ್ಯಾಕೆಟ್ ನ್ನು ತೆರೆದು ಅವುಗಳಲ್ಲಿ ಇದ್ದಂತಹ ಸೀರೆ, ರವಿಕೆ ಮತ್ತು ಲಂಗ ವನ್ನು ಸಾಕ್ಷಿಗೆ ತೋರಿಸಲಾಗಿ, ಅವುಗಳ ಬಗ್ಗೆ ನನಗೆ

ಗೊತ್ತಿಲ್ಲ ಎನ್ನುತ್ತಾರೆ. ಸೀರೆಯನ್ನು ಎಂ ಒ 12 ಎಂತಲು, ರವಿಕೆಯನ್ನು ಎಂ ಒ 13 ಎಂತಲು, ಲಂಗವನ್ನು ಎಂ ಒ 14 ಎಂತಲು ಗುರುತುಪಡಿಸಿಕೊಳ್ಳಲಾಯಿತು. ಈ ಬಟ್ಟೆಗಳನ್ನು ಪೋಲೀಸರು ನಮ್ಮ ಸಮಕ್ಷಮ ಅಮಾನತ್ತು ಪಡಿಸಿಕೊಂಡುಬಿಳಿಯ ಬಟ್ಟೆಯ ಬ್ಯಾಗ್ ಗಳಲ್ಲಿ ಪ್ರತ್ಯೇಕವಾಗಿ ಹಾಕಿ, ಸೀಲು ಮಾಡಿ ನಂತರ ನಮ್ಮ ಸಹಿಗಳನ್ನು ಚೀಟಿಯ ಮೇಲೆ ಪಡೆದು ಅಂಟಿಸಿರುತ್ತಾರೆ ಎನ್ನುವುದು ಸರಿಯಲ್ಲ. ಸದರಿ ಮಹಜರ್ ನ್ನು ಮೇಲ್ಕಂಡ ಸ್ಥಳ ಮಹಜರ್ ನ್ನು ಮಾಡಿದ ನಂತರ ಮಧ್ಯ ರಾತ್ರಿ 01.00 ಗಂಟೆಯಿಂದ 01.30 ರ ಸಮಯದವರೆಗೂ ಮಾಡಿ ರುತ್ತಾರೆ ಎನ್ನುವುದು ಸರಿಯಲ್ಲ. ನಂತರ ಅದನ್ನು ಓದಿ ಹೇಳಿ, ವಿಚಾರ ತಿಳಿಸಿ ನನ್ನ ಸಹಿಯನ್ನು ಪೋಲೀಸ್ ಠಾಣೆಯಲ್ಲಿ ಪಡೆದಿರುತ್ತಾರೆ ಎನ್ನುವುದು ಸರಿಯಲ್ಲ. ಮೇಲ್ಕಂಡ ಎರಡೂ ಮಹಜರ್ ಗಳ ವಿಷಯ ನನಗೆ ತಿಳಿದಿದ್ದರೂ ಸಹ, ಆರೋಪಿತರೊಂದಿಗೆ ನಾನು ಚೆನ್ನಾಗಿರುವುದರಿಂದ , ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ</u>

11. ನಾನು ಚಿಕ್ಕರಾಜಶೆಟ್ಟಿ, ಅವರ 2 ನೇ ಹೆಂಡತಿ ಮತ್ತು ಆಕೆಯ ಮಕ್ಕಳೊಂದಿಗೂ ಸಹ ನಾನು ಚೆನ್ನಾಗಿದ್ದೇನೆ ಎನ್ನುವುದು ಸರಿ. ಶ್ರೀಕಂಠ ತನ್ನ ಹೆಂಡತಿ ಮಕ್ಕಳೊಂದಿಗೆ ನಮ್ಮ ಗ್ರಾಮದಲ್ಲೇ ವಾಸವಾಗಿದ್ದಾನೆ ಎನ್ನುವುದು ಸರಿ. ಆತನ ಮನೆಯನ್ನು ನಾನು ನೋಡಿದ್ದೇನೆ. ಆತ ಮನೆಯಿಂದ ಹೊರ ಹೋಗಬೇಕಾದರೆ ಮನಗೆ ಬೀಗ ಹಾಕಿಕೊಂಡು ಹೋಗುತ್ತಿದ್ದ ಎನ್ನುವುದು ಸರಿ. ಪೋಲೀಸರೊಂದಿಗೆ ನಾನು ಆ ಮನೆಯ ಹತ್ತಿರಕ್ಕೆ ಹೋದಾಗ , ಮನೆಯ ಬಾಗಿಲಿಗೆ ಬೀಗ ಹಾಕಿರಲಿಲ್ಲ , ಒಂದು ವೈರನ್ನು ಬಿಗಿದು

ಕಟ್ಟಲಾಗಿತ್ತು ಎನ್ನುವುದು ಸರಿ . ಅಲ್ಲಿ ಬೀಗ ಮುರಿದು ನೇತಾಡುತ್ತಿರಲಿಲ್ಲ. ನಾವು ಮನೆಯ ಒಳಗೆ ಹೋದಾಗ , 2 ನೇ ಆರೋಪಿ ಬಸಮ್ಮ ಸಹ ಮನೆಯ ಒಳಗೆ ಬಂದು ಅಲ್ಲಿ ಬಿದ್ದಿದ್ದ ಚಿಕ್ಕರಾಜಶೆಟ್ಟಿಯನ್ನು ನೋಡಿ ಅಳುತ್ತಾ ತನ್ನ ತೊಡೆಯ ಮೇಲೆ ಮಲಗಿಸಿಕೊಂಡಳು ಎನ್ನುವುದು ಸರಿ. ನಂತರ ಒಂದು ವಾರ ಕಳೆದ ಮೇಲೆ ಪೋಲೀಸರು ಠಾಣೆಗೆ ನನ್ನನ್ನು ಕರೆಯಿಸಿ ಸಹಿಗಳನ್ನು ಪಡೆದರು ಎನ್ನುವುದು ಸರಿ .

ಮರು ವಿಚಾರಣೆ ಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**